ಎಂ.ವಿ.ಸಿ - 1072/2023
ಪಿ.ಡಬ್ಲ್ಯು. - 01

**ದಿನಾಂಕ 20-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ನೇ ಎದುರುದಾರರ ಪರ ಶ್ರೀ ಡಿ.ಬಿ.ಎಸ್ ವಕೀಲರಿಂದಃ**

ಅಪಘಾತದ ದಿನ ಆಟೋ ರಿಕ್ಷಾವನ್ನು ನಾನೇ ಚಲಾಯಿಸಿಕೊಂಡು ಬರುತಿದ್ದೆ . ನನಗೆ ಲೈಸೆನ್ಸ್ ಇರುತ್ತದೆ. ಅಪಘಾತದ ಬಗ್ಗೆ ನಾನು ಪೊಲೀಸ್ ಠಾಣೆಗೆ ದೂರು ಕೊಟ್ಟಿಲ್ಲ . ದೂರುದಾರ ಸಂದೀಪ್ ನನ್ನ ಅಣ್ಣ. ನಾವು ಆಸ್ಪತ್ರೆಗೆ ಹೋದಾಗ ಸಂದೀಪ್ ಬಂದಿರುತ್ತಾರೆ. ನನ್ನನ್ನು ಆಸ್ಪತ್ರೆಗೆ ಬೇರೆಯವರು ಕರೆದುಕೊಂಡು ಹೋಗಿರುತ್ತಾರೆ. ಸಂದೀಪ್ ಗೆ ಅಪಘಾತದ ಬಗ್ಗೆ ಗೊತ್ತಿಲ್ಲ . ನನ್ನ ಅಣ್ಣ ಸಂದೀಪ್ ಅಪಘಾತವಾದ ಒಂದು ಗಂಟೆಯ ನಂತರ ಬಂದಿರುತಾರೆ . ನನ್ನ ಅಣ್ಣ ಸಂದೀಪ್ ಕೊಟ್ಟ ದೂರಿನ ಮೇರೆಗೆ ಪ್ರಕರಣ ದಾಖಲಾಯಿತು ಎಂದರೆ ಸರಿ . ಅಪಘಾತದಿನ ನಾವು ಉಡುಪಿಯಿಂದ ಕಾಪು ಕಡೆಗೆ ಹೋಗುವಾಗ ಆಗಿರುತ್ತದೆ . ನನ್ನ ಆಟೋದಲ್ಲಿ ಮೃತಪಟ್ಟ ವಸಂತಿ ಒಬ್ಬರೇ ಇದ್ದರು . ವಸಂತಿ ಮತ್ತು ನನ್ನ ನಡುವೆ ಒಳ್ಳೆಯ ಅನ್ಯೋನ್ಯತೆ ಇತ್ತು . ನೀವು ಮುಂದೆ ಹೋಗುತಿದ್ದ ವಾಹನಕ್ಕೆ ಡಿಕ್ಕಿಪಡಿಸಿದಿರಾ ಅಲ್ಲವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸದ್ರಿ ವಾಹನದ ಚಾಲಕನು ನನ್ನ ಆಟೋವನ್ನು ಒವರ್ ಟೇಕ್ ಮಾಡಿ ಒಮ್ಮೆಲೇ ನಿಲ್ಲಿಸಿದ್ದರಿಂದ ಅಪಘಾತವಾಗಿದೆ ಎಂದು ತಿಳಿಸಿರುತ್ತಾರೆ . ನನ್ನ ಆಟೋವನ್ನು ಒವರ್ ಟೇಕ್ ಮಾಡಿದ ನಂತರ 10-15 ಮೀಟರ್ ದೂರದಲ್ಲಿ ಹೋಗಿ ನಿಲ್ಲಿಸಿರುತ್ತಾನೆ. ನನ್ನನ್ನು ಒವರ್ ಟೇಕ್ ಮಾಡಿದ ನಂತರ ಆತ ರಸ್ತೆಯ ಎಡಭಾಗದಲ್ಲಿ ನಿಲ್ಲಿಸಿರುತ್ತಾನೆ. ಆತ ನಿಲ್ಲಿಸಿದ 1-2 ಸೆಕೆಂಟ್‌ನಲ್ಲಿ ಅಪಘಾತವಾಗಿರುತ್ತದೆ. ಅಪಘಾತವಾಗುವ ಸಮಯದಲ್ಲಿ ನನ್ನ ವಾಹನದ ಬಲಭಾಗದ ರಸ್ತೆ ಖಾಲಿ ಇತ್ತು ಎಂದರೆಸಾಕ್ಷಿ ಅಲ್ಲಿ ಬೇರೆ ವಾಹನ ಹೋಗುತ್ತಿತ್ತು ಎಂದು ತಿಳಿಸಿರುತ್ತಾರೆ. ಅದು ಯಾವ ವಾಹನ ಹೋಗುತಿತ್ತು ಎಂದು ಈಗ ನೆನಪಿಲ್ಲ . ನಾನು ಹೋಗುತಿದ್ದ ರಸ್ತೆಯ ಎಡಭಾಗದಲ್ಲಿ 6 ಅಡಿ ಯಷ್ಟು ಮಣ್ಣಿನ ರಸ್ತೆ ಇತ್ತು . ನಿಮ್ಮ ವಾಹನವನ್ನು ಬ್ರೇಕ್ ಹಾಕಿನಿಲ್ಲಿಸಲು ಪ್ರಯತ್ನ ಪಟೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ಪ್ರಯತ್ನ ಪಟ್ಟೆ ಆದರೇಆತ ಒಮ್ಮೆಲೇ ನಿಲ್ಲಿಸಿದ್ದರಿಂದ ನನ್ನ ವಾಹನ ಡಿಕ್ಕಿ ಆಯಿತು . ನಾನು 4-5 ವರ್ಷಗಳಿಂದ ಆಟೋ ರಿಕ್ಷಾ ಚಾಲಕನಾಗಿ ಚಲಾಯಿಸುತಿದ್ದೇನೆ . ಒಂದು ವಾಹನದಿಂದ ಮತ್ತೊಂದು ವಾಹನಕ್ಕೆ 15 ಅಡಿ ಯಷ್ಟು ಅಂತರ ಕಾಯ್ದುಕೊಳ್ಳಬೇಕು ಎಂಬ ನಿಯಮ ನನಗೆ ಗೊತ್ತು . ನಾನು ಆ ರೀತಿ ಅಂತರವನ್ನು ಕಾಯ್ದುಕೊಳ್ಳದೇ ಇದ್ದುದರಿಂದ

ಅಪಘಾತವಾಯಿತು ಎಂದರೆ ಸಾಕ್ಷಿ ಅವರು ಒಮ್ಮೆಲೇ ನಿಲ್ಲಿಸಿದ್ದರಿಂದ ಅಪಘಾತವಾಯಿತು ಎಂದು ತಿಳಿಸಿರುತ್ತಾರೆ . ಸದ್ರಿ ವಾಹನದ ಚಾಲಕ ಆತನ ಪಾಡಿಗೆ ಹೋಗುತಿದ್ದಾಗ ನಾನೇ ಹಿಂದಿನಿಂದ ಹೋಗಿ ಅಪಘಾತ ಪಡಿಸಿದೆ ಎಂದರೆ ಸರಿಯಲ್ಲ . ಈ ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ . ನನ್ನ ತಪ್ಪಿನಿಂದ ಅಪಘಾತ ಆಗಿದ್ದರೂ ಕೂಡ ನನ್ನ ಅಣ್ಣ ಸುಳ್ಳು ದೂರು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ .

ನಾನು 4 ದಿನಗಳ ಕಾಲ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದೆ . ಈಗ ನಾನು ಚಾಲಕನಾಗಿ ಕೆಲಸ ಮಾಡುತಿಲ್ಲ . ಅಪಘಾತದ ನಂತರ ನಾನು ಲೈಸೆನ್ಸ್ ನ್ನು ನಾನು ನವೀಕರಣ ಮಾಡಿಲ್ಲ . ನವೀಕರಣ ಮಾಡುವ ಆಲೋಚನೆ ಇರುತ್ತದೆ . ವೈದ್ಯರು ಚಾಲನೆ ಮಾಡಬೇಡಿ ಎಂದು ಹೇಳಲಿಲ್ಲ. ಈಗ ನಾನು ಕೂಲಿ ಕೆಲಸಕ್ ಕೆಹೋಗುತ್ತೇನೆ . ಮನೆಯಲ್ಲಿ ಆಟೋ ರಿಕ್ಷಾ ಇರುತ್ತದೆ. ಅದನ್ನು ಬೇರೆಯವರಿಗೆ ಚಲಾಯಿಸಲು ಕೊಟ್ಟಿರುತ್ತೇನೆ . ಅಪಘಾತದಿಂದ ನನ್ನ ವೃತ್ತಿಗೆ ಯಾವುದೇ ಬಾದ್ಯತೆ ಉಂಟಾಗಿಲ್ಲ ಎಂದರೆ ಸರಿಯಲ್ಲ . ನನಗೆ ಯಾವುದೇ ಅಂಗನ್ಯೂನ್ಯೂತೆ ಉಂಟಾಗಿಲ್ಲ ಎಂದರೆ ಸರಿಯಲ್ಲ . ಅಪಘಾತದಿಂದ ನನಗೆ ಯಾವುದೇ ಆರ್ಥಿಕ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ . ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ವೈದ್ಯಕೀಯ ಖರ್ಚು, ಪೌಷ್ಟಿಕ ಆಹಾರಕ್ಕೆ, ಓಡಾಟಕ್ಕೆ, ಪರಿಚಾರಕರಿಗೆ ಖರ್ಚಾಗಿಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ಅತೀ ವೇಗ, ಅಜಾಗರೂಕತೆ ಮತ್ತು ನಿರ್ಲಕ್ಷ್ಯತನದಿಂದ ಆಗಿದ್ದು, 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ .

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.